ಕರ್ನಾಟಕ ವಿಧಾನ ಮಂಡಲ

ಬೆಳಗಾವಿ ಅಧಿವೇಶನ

ಶುಕ್ರವಾರ ದಿನಾಂಕ 16 ನೇ ಜನವರಿ 2009 ರಂದು ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತು ಸದಸ್ಯರು ಬೆಳಗಾವಿಯ ಜವಹರಲಾಲ್ ನೆಹರು ವೈದ್ಯಕೀಯ ವಿದ್ಯಾಲಯ ಆವರಣದಲ್ಲಿರುವ ಡಾ॥ ಬಿ.ಎಸ್.ಜೀರಿಗೆ ಸಭಾಂಗಣದಲ್ಲಿ ಮಧ್ಯಾಹ್ನ 12 : 30 ಗಂಟೆಗೆ ಉಪಸ್ಥಿತರಿದ್ದರು. ದಿನಾಂಕ 16ನೇ ಜನವರಿ 2009, ಶುಕ್ರವಾರದಂದು ಬೆಳಗಾವಿಯಲ್ಲಿ ನಡೆಸಿದ ರಾಜ್ಯ ವಿಧಾನ ಮಂಡಲದ ಅಧಿವೇಶನದ ಸಂದರ್ಭದಲ್ಲಿ ಕರ್ನಾಟಕ ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣ

ಸನ್ಮಾನ್ಯ ಸಭಾಪತಿಯವರೆ, ಸನ್ಮಾನ್ಯ ಸಭಾಧ್ಯಕ್ಷರೆ ಹಾಗೂ ಸನ್ಮಾನ್ಯ ಸದಸ್ಯರೆ,

ನಿಮ್ಮೆಲ್ಲರಿಗೂ ಹೊಸ ವರ್ಷದ ಮತ್ತು ಸಂಕ್ರಾಂತಿಯ ಶುಭಾಷಯಗಳು. ಕರ್ನಾಟಕ ವಿಧಾನ ಮಂಡಲದ ಈ ಜಂಟಿ ಅಧಿವೇಶನಕ್ಕೆ ನಿಮ್ಮೆಲ್ಲರನ್ನೂ ಸಹ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಕರ್ನಾಟಕದ ಅತ್ಯಂತ ಹೆಮ್ಮೆಯ ಪ್ರತಿಷ್ಠಿತ ನಗರವಾದ ಬೆಳಗಾವಿಯಲ್ಲಿ ನಡೆಯುತ್ತಿರುವ ಎರಡನೆಯ ಅಧಿವೇಶನವಿದು. ಈ ಅಧಿವೇಶನವು ಉತ್ತರ ಕರ್ನಾಟಕದ ಮತ್ತು ಗಡಿ ಪ್ರದೇಶಗಳ ಅಭಿವೃದ್ಧಿಗೆ ನನ್ನ ಸರ್ಕಾರ ಬದ್ಧವೆಂದು ಸಾರಿ ಹೇಳುವ ಸಂಕೇತವೂ ಆಗಿದೆ.

2) ಕರ್ನಾಟಕ ರಾಜ್ಯದ ಜನತೆ ಇತ್ತೀಚೆಗೆ ನಡೆದ ಉಪ ಚುನಾವಣೆಯಲ್ಲಿ ನನ್ನ ಸರ್ಕಾರಕ್ಕೆ ಅಭೂತಪೂರ್ವವಾಗಿ ಬೆಂಬಲಿಸುವ ಮೂಲಕ ಅಡಳಿತ ಸ್ಥಿರತೆಗೆ ಜನಾದೇಶ ನೀಡಿದ್ದಾರೆ. ಉಪ ಚುನಾವಣೆಯ ಫಲಿತಾಂಶಗಳು ನನ್ನ ಸರ್ಕಾರದ ಅಭಿವೃದ್ಧಿ ಮತ್ತು ಪ್ರಗತಿಪರ ನೀತಿಗಳಿಗೆ ಮತದಾರರು ನೀಡಿದ ಮೆಚ್ಚುಗೆ ಮತ್ತು ಬೆಂಬಲದ ದ್ಯೋತಕವಾಗಿದೆ. ನನ್ನ ಸರ್ಕಾರದಲ್ಲಿ ಕರ್ನಾಟಕದ ಜನತೆ ವಿಶ್ವಾಸವಿಟ್ಟಿರುವುದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ಈ ಜನಾದೇಶದಿಂದ ನನ್ನ ಸರ್ಕಾರದ ಜವಾಬ್ದಾರಿಗಳು ಇನ್ನೂ ಹೆಚ್ಚಿವೆ ಎಂದು ನಾನು ಭಾವಿಸುತ್ತೇನೆ.

3) ಶಕ್ತಿಶಾಲಿ ಮತ್ತು ಸಮೃದ್ಧ ಕರ್ನಾಟಕ ನಿರ್ಮಾಣ ಮಾಡಲು ಅಭಿವೃದ್ಧಿ ಪರವಾದ ಮತ್ತು ಸ್ಪಂದನಶೀಲ ಆಡಳಿತವನ್ನು ನೀಡುವ ಹೊಸ ಸರ್ಕಾರದ ಸಂಕಲ್ಪದ ಸಾಕಾರಕ್ಕೆ ಶೀಘ್ರವೇ ಚಾಲನೆ ನೀಡಲಾಗುವುದೆಂದು ಕಳೆದ ಜೂನ್‌ನಲ್ಲಿ ಮಾಡಿದ ವಿಧಾನ ಮಂಡಲದ ಭಾಷಣದಲ್ಲಿ ನಾನು ವಾಗ್ದಾನ ಮಾಡಿದ್ದೆ. ನುಡಿದಂತೆ ನಡೆಯಲು ಬದ್ಧವಾಗಿರುವ ನನ್ನ ಸರ್ಕಾರ ಅಭಿವೃದ್ಧಿಯ ಪಥದಲ್ಲಿ ಮುನ್ನಡೆಯುತ್ತಿದೆಯೆಂದು ಹೇಳಲು ಇಂದು ನನಗೆ ತುಂಬಾ ಸಂತೋಷವೆನಿಸುತ್ತದೆ. ನೂರು ದಿನಗಳಿಗೊಮ್ಮೆ ಕರ್ನಾಟಕದ ಜನತೆಗೆ ಪ್ರಗತಿಯ ವರದಿಯನ್ನು ಒಪ್ಪಿಸುವುದಾಗಿ ಈ ಸರ್ಕಾರ ಹೇಳಿತ್ತು ಎಂಬುದನ್ನು ಸಹ ನೆನಪಿಸಿಕೊಳ್ಳಬಹುದಾಗಿದೆ. ಅದರಂತೆ, ಮೊದಲ ನೂರು ದಿನಗಳು ತುಂಬಿದ ಸಂದರ್ಭದಲ್ಲಿ, ಹೊಸ ಸರ್ಕಾರದ ಆಶಯವನ್ನು **"ಭವ್ಯ ಭವಿಷ್ಯಕ್ಕೆ ಭದ್ರ ಬುನಾದಿ"** ಶೀರ್ಷಿಕೆಯ ಪುಸ್ತಕ ಪ್ರಕಟಣೆಯ ಮೂಲಕ ಸಾಧಿಸಲಾದ ಪ್ರಗತಿಯ ಚಿತ್ರಣವನ್ನು ಜನರ ಮುಂದಿಡಲಾಯಿತು. ಇನ್ನೂರು ದಿನಗಳ ಪ್ರಗತಿಯ ವರದಿಯನ್ನು **"ಭದ್ರ ಬುನಾದಿಯ ಮೇಲೆ ಅಭಿವೃದ್ಧಿ ಸೌಧ"** ಹೇಗೆ ನಿರ್ಮಾಣವಾಗುತ್ತಿದೆ ಎಂಬುದನ್ನು ಎತ್ತಿ ತೋರಿಸುವ ಸಲುವಾಗಿ ಇತ್ತೀಚೆಗೆ ಜನತೆಯ ಮುಂದಿಡಲಾಗಿದೆ.

4) ಐದು ವರ್ಷಕ್ಕೆ ಆಯ್ಕೆಯಾದ ಒಂದು ಸರ್ಕಾರವು ಸಾಧಿಸಿದ ಪ್ರಗತಿಯನ್ನು ಕಳೆದ ಏಳು ತಿಂಗಳಲ್ಲಿ ಅಳೆಯುವುದು ಕಷ್ಟವಾದರೂ, ಸರ್ಕಾರದ ನೀತಿ, ಧ್ಯೇಯ, ಯೋಜನೆಗಳು ಮತ್ತು ಆಡಳಿತ ವೈಖರಿಗಳಿಂದ ಅದರ ಪ್ರಗತಿಯ ದಿಕ್ಕನ್ನು ಗುರುತಿಸಬಹುದಾಗಿದೆ. ಕಳೆದ ಏಳು ತಿಂಗಳಲ್ಲಿ ರಸಗೊಬ್ಬರದ ಕೊರತೆಯಿಂದ ಉದ್ಭವವಾದ ಸಮಸ್ಯೆ, ಹಿಂದಿನ ಸರ್ಕಾರಗಳ ಸಮರ್ಪಕ ಯೋಜನೆಯ ಕೊರತೆಯಿಂದ ಉದ್ಭವವಾದ ವಿದ್ಯುತ್ ಅಭಾವ, ಮಳೆಯ ವೈಫಲ್ಯ ಮತ್ತು ನೈಸರ್ಗಿಕ ವಿಕೋಪಗಳು ಹಾಗೂ ಸಮಾಜ ಘಾತುಕ ಶಕ್ತಿಗಳು ಮತ್ತು ಭಯೋತ್ಪಾದಕರು ಸೃಷ್ಟಿಸಿದ ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆಗಳಿಗೆ ಎದುರಾಗಿದ್ದ ಸವಾಲುಗಳನ್ನು ನಾವು ಪರಿಣಾಮಕಾರಿಯಾಗಿ ಎದುರಿಸಿದ್ದೇವೆ.

<u>ಪ್ರಸ್ತುತ ಆರ್ಥಿಕ ಚಿತ್ರ</u> :-

5) ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ತೀವ್ರ ಆರ್ಥಿಕ ಬಿಕ್ಕಟ್ಟಿನ ಪರಿಣಾಮವಾಗಿ ನಮ್ಮ ದೇಶವು ಸಹ ಇಕ್ಕಟ್ಟಿನ ಪರಿಸ್ಥಿತಿಯನ್ನು ಎದುರಿಸುತ್ತಿದೆ. ವರ್ಷ ಕಳೆದಂತೆ ಆರ್ಥಿಕ ಹಿಂಜರಿತ ತೀವ್ರವಾಗಿ ಬಿಗಡಾಯಿಸಿದ್ದು, ಇದರಿಂದಾಗಿ ಅಭಿವೃದ್ಧಿ ಹಾಗೂ

ಬೆಳವಣಿಗೆಯು ಕ್ರಮೇಣ ಕಡಿಮೆಯಾಗಿದೆ. ಜಾಗತಿಕ ಮತ್ತು ರಾಷ್ಟ್ರಮಟ್ಟದ ಆರ್ಥಿಕ ಬಿಕ್ಕಟ್ಟು ಕರ್ನಾಟಕಕ್ಕೂ ಹಬ್ಬಿದ ಪರಿಣಾಮವಾಗಿ, ಕರ್ನಾಟಕದ ಆರ್ಥಿಕ ಬಲವರ್ಧನೆಗೆ ಹೆಚ್ಚಿನ ಪಾಲನ್ನು ನೀಡುತ್ತಿರುವ ಮಾಹಿತಿ ತಂತ್ರಜ್ಞಾನ ಕ್ಷೇತ್ರವು ಸಂಕಷ್ಟಕ್ಕೊಳಗಾಗಿದೆ. ಸಿದ್ಧ ಉಡುಪು, ಕೈಗಾರಿಕಾ ಉತ್ಪನ್ನಗಳು ಮತ್ತು ಮೋಟಾರು ವಾಹನಗಳ ಮಾರಾಟದಲ್ಲಿ ಕೂಡ ಅತಿಯಾದ ಇಳಿಕೆ ಕಂಡುಬಂದಿದೆ. ಸ್ಥಿರಾಸ್ತಿಗಳ ಮಾರಾಟ ಮತ್ತು ನೋಂದಣಿಯಲ್ಲಿಯೂ ಹಿನ್ನಡೆಯುಂಟಾಗಿದೆ. ಒಟ್ಟಾರೆ ಆರ್ಥಿಕ ಹಿಂಜರಿತದ ಹಿನ್ನೆಲೆಯಲ್ಲಿ ರಾಜ್ಯದ ತೆರಿಗೆ ಸಂಗ್ರಹಣೆಯೂ ನಿರೀಕ್ಷೆಗಿಂತ ಕಡಿಮೆಯಾಗಿದೆ.

6) ಆರ್ಥಿಕ ಇಕ್ಕಟ್ಟಿನ ಪರಿಸ್ಥಿತಿ ಹಿನ್ನೆಲೆಯಲ್ಲಿ ಇಳಿಮುಖವಾಗುತ್ತಿರುವ ರಾಜ್ಯದ ಆದಾಯದಲ್ಲಿ ಎಲ್ಲಾ ಅಭಿವೃದ್ಧಿ ಕಾರ್ಯಗಳಿಗೆ ಸಮರ್ಪಕವಾದ ಹಣಕಾಸಿನ ನೆರವನ್ನು ಒದಗಿಸುವ ಗುರುತರ ಜವಾಬ್ದಾರಿ ಸರ್ಕಾರದ ಮೇಲಿದೆ. ಆರ್ಥಿಕ ಹೊಣೆಗಾರಿಕೆ ಅಧಿನಿಯಮದ ಚೌಕಟ್ಟಿನಲ್ಲಿರುವಂತೆ ಅಭಿವೃದ್ಧಿ ಕಾರ್ಯಗಳಿಗೆ ಹಣಕಾಸಿನ ನೆರವನ್ನು ನೀಡುವುದಕ್ಕೆ ಸರ್ಕಾರ ಪ್ರಯತ್ನಿಸುತ್ತಿದೆ.

<u>ಆಂತರಿಕ ಭದ್ರತೆ</u> :-

7) ಆಂತರಿಕ ಭದ್ರತೆ ಮತ್ತು ಸ್ಥಿರತೆಯ ವಿಷಯದಲ್ಲಿ ನಮ್ಮ ದೇಶ ಈಗ ದೊಡ್ಡ ಸವಾಲನ್ನು ಎದುರಿಸುತ್ತಿದೆ. ಬಾಹ್ಯ ಶಕ್ತಿಗಳ ಪ್ರಚೋದನೆಯಿಂದ ನಡೆಯುತ್ತಿರುವ ಭಯೋತ್ಪಾದಕ ಚಟುವಟಿಕೆಗಳನ್ನು ಹತ್ತಿಕ್ಕಲು ರಾಷ್ಟ್ರ ಒಂದಾಗಿ ಹೋರಾಡಬೇಕಾಗಿದೆ. ಈ ದಿಶೆಯಲ್ಲಿ ನನ್ನ ಸರ್ಕಾರ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲು ಪ್ರಥಮ ಆದ್ಯತೆ ನೀಡಿದ್ದು, ರಾಜ್ಯದ ನಾಗರಿಕರ ಮತ್ತು ಆಸ್ತಿಯ ಸಂರಕ್ಷಣೆಗೆ ಸಾಕಷ್ಟು ಕ್ರಮಗಳನ್ನು ಕೈಗೊಂಡಿದೆ. ಇದರಲ್ಲಿ ಪ್ರಮುಖವಾಗಿ 24/7 ಪೊಲೀಸ್ ಕಂಟ್ರೋಲ್ ರೂಂಗಳ ಸ್ಥಾಪನೆ, ಗುಪ್ತಚರ ಮತ್ತು ಆಂತರಿಕ ಭದ್ರತೆ ವಿಭಾಗಗಳ ಬಲವರ್ಧನೆ, ಶಾಂತಿ ಸುವ್ಯವಸ್ಥೆ ಪರಿಸ್ಥಿತಿಯ ನಿರಂತರ ಪರಿಶೀಲನೆ, ಸೂಕ್ಷ್ಮ ಮತ್ತು ಮಹತ್ವದ ಸ್ಥಾವರಗಳಿಗೆ ರಕ್ಷಣೆ, ಖಾಸಗಿ ಸಂಸ್ಥೆಗಳಿಗೆ ಸಂರಕ್ಷಣೆ ವಿಷಯದಲ್ಲಿ ಸಮನ್ವಯ ಮತ್ತು ಮಾರ್ಗದರ್ಶನ, ಪೊಲೀಸ್ ಇಲಾಖೆಗೆ ಹೆಚ್ಚಿನ ಅನುದಾನ ಮತ್ತು ಖಾಲಿ ಹುದ್ದೆಗಳ ಭರ್ತಿ, ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಪೊಲೀಸ್ ಸಿಬ್ಬಂದಿಯ ಸಾಮರ್ಥ್ಯ ವೃದ್ಧಿ ಮತ್ತು ಭದ್ರತಾ ವಿಷಯದಲ್ಲಿ ನಾಗರಿಕ ಸಹಯೋಗ ಒಳಗೊಂಡಿರುತ್ತವೆ.

8) ಭಯೋತ್ಪಾದನೆ ರಾಜ್ಯ ಮತ್ತು ದೇಶಗಳ ಎಲ್ಲೆಗಳನ್ನು ಮೀರಿದೆ. ಕಳೆದ ನವೆಂಬರ್‌ನಲ್ಲಿ ನಡೆದ ಮುಂಬೈ ಮೇಲಿನ ದಾಳಿಯ ಹಿನ್ನೆಲೆಯಲ್ಲಿ ನಾವು ಹೆಚ್ಚು ಎಚ್ಚರ ವಹಿಸಬೇಕಿದೆ. ರಾಜ್ಯಗಳಿಗೆ ಕೇಂದ್ರದಿಂದ ಸಾಕಷ್ಟು ತಾಂತ್ರಿಕ, ಆರ್ಥಿಕ ನೆರವು ಮತ್ತು ಪರಿಣಿತ ಪಡೆಗಳ ಸಹಾಯ ಅತ್ಯಗತ್ಯ. ಭಯೋತ್ಪಾದನೆಯನ್ನು ತಡೆಯಲು ನಾವು ಇನ್ನೂ ಹೆಚ್ಚು ಸನ್ನದ್ಧರಾಗಬೇಕಾಗಿದೆ.

9) ನನ್ನ ಸರ್ಕಾರವು ಬೆಂಗಳೂರಿಗೆ ಎನ್.ಎಸ್.ಜಿ. ಘಟಕವನ್ನು ಮಂಜೂರು ಮಾಡಲು ಪ್ರಬಲವಾಗಿ ಒತ್ತಾಯ ಮಾಡಿದ್ದಾಗ್ಯೂ ಇದಕ್ಕೆ ಒಪ್ಪಿಗೆ ನೀಡಲಾಗಿಲ್ಲ. ಬೆಂಗಳೂರಿನಂತಹ ಜಾಗತಿಕ ಮಹತ್ವದ ಮತ್ತು ಸೂಕ್ಷ್ಮ ರಕ್ಷಣಾ ಘಟಕಗಳನ್ನು ಹೊಂದಿರುವ ನಗರವು ಎನ್.ಎಸ್.ಜಿ. ಘಟಕ ಪಡೆಯಲು ಎಲ್ಲಾ ಅರ್ಹತೆ ಹೊಂದಿದೆ. ನಾವು ಈ ವಿಷಯವನ್ನು ಕೇಂದ್ರ ಸರ್ಕಾರ ಹಾಗೂ ಮಾನ್ಯ ಪ್ರಧಾನಮಂತ್ರಿಯವರ ಬಳಿ ಪ್ರಸ್ತಾಪಿಸಿದ್ದೇವೆ. ಭಾರತ ಸರ್ಕಾರ ಬೆಂಗಳೂರಿಗೆ ಅತ್ಯಗತ್ಯವಾಗಿರುವ ಎನ್.ಎಸ್.ಜಿ. ಘಟಕವನ್ನು ಮಂಜೂರು ಮಾಡಬೇಕೆಂದು ನನ್ನ ಸರ್ಕಾರವು ಮತ್ತೊಮ್ಮೆ ಪ್ರಬಲವಾಗಿ ಒತ್ತಾಯಿಸುತ್ತದೆ.

ಜನರ ಬಳಿಗೆ ಸರ್ಕಾರ :-

10) ಜನರ ಬಳಿಗೆ ಸರ್ಕಾರವನ್ನು ಕೊಂಡೊಯ್ಯುವ ಕ್ರಮವಾಗಿ ಮತ್ತು ಸಾಮಾನ್ಯ ಜನರ ಸಮಸ್ಯೆ ನಿವಾರಣೆಗೆ ಸೆಪ್ಟೆಂಬರ್ 20, 2008 ರಿಂದ ಜನಸ್ಪಂದನ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದೇವೆ. ಪ್ರತಿ ಶನಿವಾರ (2 ನೇ ಶನಿವಾರ ಬಿಟ್ಟು) ಎಲ್ಲಾ ತಾಲ್ಲೂಕುಗಳಲ್ಲಿ ಹೋಬಳಿ ಮಟ್ಟದ ಜನಸ್ಪಂದನ ಕಾರ್ಯಕ್ರಮ ತಪ್ಪದೇ ನಡೆಯುತ್ತಿದೆ. ಈವರೆಗೆ ಸುಮಾರು 5.50 ಲಕ್ಷ ಅರ್ಜಿಗಳು ಸ್ವೀಕಾರವಾಗಿದ್ದು, 3.60 ಲಕ್ಷ ಅರ್ಜಿಗಳು ವಿಲೇವಾರಿಯಾಗಿವೆ (ಶೇಕಡ 65). ಈ ವಿನೂತನ ಪ್ರಯೋಗದಿಂದಾಗಿ ಸಾರ್ವಜನಿಕರು ಸರ್ಕಾರಿ ಕಛೇರಿಗಳಿಗೆ ಅಲೆದಾಡುವುದು ಮತ್ತು ಅಧಿಕಾರಿಗಳ ಭೇಟಿಗೆ ಕಾಯುವ ಪ್ರಮೇಯ ಗಣನೀಯವಾಗಿ ಕಡಿಮೆಯಾಗಿದೆ. ಸಂಧ್ಯಾ ಸುರಕ್ಷಾ, ಭಾಗ್ಯಲಕ್ಷ್ಮಿ, ವಿವಿಧ ನಿವೃತ್ತಿ ವೇತನ ಯೋಜನೆಗಳಂತಹ ಯೋಜನೆಗಳನ್ನು ನೇರವಾಗಿ ಅರ್ಹ ಫಲಾನುಭವಿಗಳ ಬಳಿಗೆ ಕೊಂಡೊಯ್ಯುವ ಜೊತೆಗೆ ಸಾರ್ವಜನಿಕ ಕುಂದುಕೊರತೆಗಳ ನಿವಾರಣೆಗೂ ಈ ಜನಸ್ಪಂದನ ಕಾರ್ಯಕ್ರಮ ಉಪಯುಕ್ತ ವೇದಿಕೆಯಾಗಿದೆ. ಮುಂಬರುವ ದಿನಗಳಲ್ಲಿ ಈ ಜನಪ್ರಿಯ ಕಾರ್ಯಕ್ರಮದ ವ್ಯಾಪ್ತಿಯನ್ನು ವಿಸ್ತರಿಸಿ ಗ್ರಾಮ ಮಟ್ಟದ ಯೋಜನೆಗಳ ಅನುಷ್ಠಾನ, ಕಾಮಗಾರಿಗಳ ತಪಾಸಣೆ

ಹಾಗೂ ಅಂಗನವಾಡಿ, ಶಾಲೆಗಳು ಹಾಗೂ ಆಸ್ಪತ್ರೆಗಳಂತಹ ಸರ್ಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆಯ ಮೇಲ್ವಿಚಾರಣೆಗೂ ಸಹಾಯಕವಾಗುವಂತೆ ಕ್ರಮ ತೆಗೆದುಕೊಳ್ಳಲಾಗುವುದು.

ಹೈದ್ರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ :-

11) ನಮ್ಮ ರಾಜ್ಯದ ಹೈದ್ರಾಬಾದ್ - ಕರ್ನಾಟಕ ಪ್ರದೇಶವು ಆರ್ಥಿಕ, ಶೈಕ್ಷಣಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದಿದೆ. ಈ ಪ್ರದೇಶದ ಸರ್ವತೋಮುಖ ಅಭಿವೃದ್ಧಿಗೆ ನನ್ನ ಸರ್ಕಾರ ಬದ್ಧವಾಗಿದೆ. ಭಾರತದ ಸಂವಿಧಾನದ 371 ನೇ ಅನುಚ್ಛೇದನಕ್ಕೆ ತಿದ್ದುಪಡಿ ತಂದು ಈ ಪ್ರದೇಶದ ಸಮಗ್ರ ಅಭಿವೃದ್ಧಿಗೆ ಶಾಸನಬದ್ಧ ಚಾಲನೆ ನೀಡಲು ಕೇಂದ್ರ ಸರ್ಕಾರವನ್ನು ನಾವು ಒತ್ತಾಯಿಸುತ್ತಿದ್ದೇವೆ. ಹೈದ್ರಾಬಾದ್-ಕರ್ನಾಟಕದ ಯುವಕರಿಗೆ ಹಾಗೂ ಜನರಿಗೆ ಶೈಕ್ಷಣಿಕ ಹಾಗೂ ಉದ್ಯೋಗಾವಕಾಶಗಳನ್ನು ಕಲ್ಪಿಸುವಲ್ಲಿ 371 ನೇ ಅನುಚ್ಛೇದದ ತಿದ್ದುಪಡಿ ಅತ್ಯಾವಶ್ಯಕ. ಈ ಸದನದ ಮೂಲಕ ನಾವೆಲ್ಲ ಒಟ್ಟಾಗಿ ಕೇಂದ್ರ ಸರ್ಕಾರದ ಮೇಲೆ ಮತ್ತೊಮ್ಮೆ 371 ನೇ ಅನುಚ್ಛೇದಕ್ಕೆ ತಿದ್ದುಪಡಿ ತರಲು ಒತ್ತಾಯಿಸೋಣ. ನಮ್ಮ ಕಡೆಯಿಂದ ನಾವು ಡಾ॥ ನಂಜುಂಡಪ್ಪ ಸಮಿತಿಯ ವರದಿಯ ಅನುಸಾರ ಈ ಭಾಗದ ಅಭಿವೃದ್ಧಿಗೆ ವಿಶೇಷ ಯೋಜನೆಯನ್ನು ತಯಾರಿಸಿ ಆಯವ್ಯಯದಲ್ಲಿ ಗಣನೀಯ ಅನುದಾನವನ್ನು ಒದಗಿಸಿದ್ದೇವೆ. ಈ ಪ್ರದೇಶದ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದ ಮೇಲ್ವಿಚಾರಣೆಗೆ ಉನ್ನತ ಮಟ್ಟದ ಸಮಿತಿಯನ್ನು ನಾವು ರಚಿಸಿದ್ದೇವೆ.

ಕೃಷಿಕರ ಕನಸು ನನಸಾಗುವತ್ತ :-

12) ಕೃಷಿಕರ ಕನಸುಗಳನ್ನು ನನಸಾಗಿಸುವತ್ತ ಹಲವಾರು ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಒಣ ಭೂಮಿ ಬೇಸಾಯ ಆಶ್ರಿತ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ರೂ. 1000 ಸಹಾಯ ಧನ ನೀಡಲಾಗುತ್ತಿದೆ. ಈ ಉದ್ದೇಶಕ್ಕಾಗಿ ಈವರೆಗೆ ರೂ. 210 ಕೋಟಿ ಬಿಡುಗಡೆ ಮಾಡಿದೆ. 3 ಪ್ರತಿ ಶತ ಬಡ್ಡಿ ದರದಲ್ಲಿ 9.64 ಲಕ್ಷ ರೈತರಿಗೆ ಒಟ್ಟಾರೆ ರೂ. 2486 ಕೋಟಿ ಸಾಲ ನೀಡಲಾಗಿದೆ. ರೈತರನ್ನು ಜಾಗತಿಕ ಮಾರುಕಟ್ಟೆ ಸ್ಪರ್ಧೆಗೆ ಸಿದ್ಧಗೊಳಿಸುವ ನಿಟ್ಟಿನಲ್ಲಿ ಒಂದು ಸಾವಿರ ರೈತರನ್ನು ವಿದೇಶಗಳಿಗೆ ಅಧ್ಯಯನ ಪ್ರವಾಸಕ್ಕಾಗಿ ಕಳುಹಿಸುವ ಕಾರ್ಯ ಪ್ರಾರಂಭವಾಗಿದೆ. ಈಗಾಗಲೇ ಎರಡು ತಂಡಗಳನ್ನು ಚೀನಾಕ್ಕೆ ಕಳುಹಿಸಲಾಗಿದೆ. ಕರ್ನಾಟಕ ಸಹಕಾರ ಮಾರಾಟ ಮಹಾಮಂಡಳಿಗೆ ರಸಗೊಬ್ಬರ ಖರೀದಿಗೆ ರೂ. 250 ಕೋಟಿ ಆರ್ಥಿಕ ಬೆಂಬಲ

ಮತ್ತು ರೈತರಿಗೆ ಗುಣಮಟ್ಟದ ಬೀಜ ಪೂರೈಸಲು ರೂ. 44 ಕೋಟಿ ಸಹಾಯಧನ ನೀಡಲಾಗಿದೆ. ಕೃಷಿ ಯಾತ್ರೀಕರಣ ಯೋಜನೆಯಡಿ 12,000 ರೈತರಿಗೆ 45 ಕೋಟಿ ನೆರವು ನೀಡಿದೆ.

13) ಗುಲ್ಬರ್ಗಾ ವಿಭಾಗದ ರಾಯಚೂರಿನಲ್ಲಿ ಕೃಷಿ ವಿಶ್ವವಿದ್ಯಾನಿಲಯ ಮತ್ತು ಬೆಳಗಾವಿ ವಿಭಾಗದ ಬಾಗಲಕೋಟೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾನಿಲಯ ಸ್ಥಾಪನೆಗೆ ಆದ್ಯಾದೇಶ ಹೊರಡಿಸಲಾಗಿದ್ದು, ಈ ಅಧಿವೇಶನದಲ್ಲಿ ಆದ್ಯಾದೇಶಗಳ ಸ್ಥಾನದಲ್ಲಿ ವಿಧೇಯಕಗಳನ್ನು ಮಂಡಿಸಲಾಗುವುದು.

14) ರಸಗೊಬ್ಬರ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಸಾವಯವ ಕೃಷಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ದೇಶದಲ್ಲಿಯೇ ಪ್ರಥಮ ಬಾರಿಗೆ ತಜ್ಞರು ಮತ್ತು ಪ್ರಗತಿಪರ ಕೃಷಿಕರನ್ನೊಳಗೊಂಡ ಸಾವಯವ ಕೃಷಿ ಆಯೋಗವನ್ನು ರಚಿಸಲಾಗಿದೆ. ಮತ್ತು ಈ ಆಯೋಗ ತನ್ನ ಕಾರ್ಯಚಟುವಟಿಕೆಗಳನ್ನು ತೀವ್ರಗತಿಯಲ್ಲಿ ಪ್ರಾರಂಭಿಸಿದ್ದು ರಾಜ್ಯಾದ್ಯಂತ ಈಗಾಗಲೇ 51,000 ರೈತರನ್ನು ಸದಸ್ಯರನ್ನಾಗಿ ನೋಂದಣಿ ಮಾಡಿದೆ.

15) ನೀರಿನ ಸಮರ್ಪಕ ಮತ್ತು ಪರಿಣಾಮಕಾರಿ ಬಳಕೆಗೆ ಜಲಸಂಪನ್ಮೂಲ ಪ್ರಾಧಿಕಾರ ರಚನೆ ಮಾಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ನೀರಾವರಿಗೆ ರೂ. 1,500 ಕೋಟಿ ಖರ್ಚು ಮಾಡಿದ್ದು, 25,000 ಎಕರೆ ಭೂಮಿಗೆ ಹೆಚ್ಚುವರಿ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗಿದೆ. ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಭದ್ರಾ ಮೇಲ್ದಂಡೆ ಯೋಜನೆಗೆ ಕೂಡ ಅನುಮೋದನೆ ನೀಡಿದೆ. ಇದರಿಂದ ಚಿಕ್ಕಮಗಳೂರು ಮತ್ತು ಚಿತ್ರದುರ್ಗ ಜಿಲ್ಲೆಗಳ 2.5 ಲಕ್ಷ ಎಕರೆಗೂ ಮೀರಿದ ಪ್ರದೇಶ ನೀರಾವರಿ ವ್ಯಾಪ್ತಿಗೆ ಬರಲಿದೆ ಮತ್ತು 156 ಕೆರೆಗಳಿಗೆ ನೀರು ತುಂಬಿಸಲು ಸಾಧ್ಯವಾಗುತ್ತದೆ. ಇದಲ್ಲದೆ ಸೊರಬ ತಾಲ್ಲೂಕಿನ ದಂಡಾವತಿ ನೀರಾವರಿ ಯೋಜನೆಗಾಗಿ 272 ಕೋಟಿ ರೂ.ಗಳ ಪರಿಷ್ಕೃತ ಅಂದಾಜಿಗೆ ಸಹ ಅನುಮೋದನೆ ನೀಡಿದೆ. ನನ್ನ ಸರ್ಕಾರ ಸಣ್ಣ ನೀರಾವರಿ ಯೋಜನೆಗಳಿಗೆ ಸಹ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದೆ, ರಾಜ್ಯದ ಕೆರೆಗಳ ಸಮಗ್ರ ಅಭಿವೃದ್ಧಿಗೆ ಯೋಜನೆ ಸಿದ್ಧಪಡಿಸಿ ಮುಂಬರುವ ವರ್ಷಗಳಲ್ಲಿ ಇವುಗಳ ಅಭಿವೃದ್ಧಿಗೆ ಚಾಲನೆ ನೀಡಲು ಉದ್ದೇಶಿಸಲಾಗಿದೆ.

16) ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನವಾಗಿ ಪ್ರತಿ ಲೀಟರ್ ಹಾಲಿಗೆ ರೂ. 2 ಹೆಚ್ಚುವರಿ ಬೆಲೆಯನ್ನು ನೀಡಲಾಗುತ್ತಿದೆ. ಈವರೆಗೆ ರೂ. 65 ಕೋಟಿ ಬಿಡುಗಡೆ

ಮಾಡಲಾಗಿದ್ದು, ಇದರಿಂದ 5.5 ಲಕ್ಷಕ್ಕೂ ಅಧಿಕ ಹಾಲು ಉತ್ಪಾದಕ ಕುಟುಂಬದ ಮಹಿಳೆಯರು ಪ್ರಯೋಜನ ಪಡೆದಿದ್ದಾರೆ.

17) ಮುಂಬರುವ ವರ್ಷದಲ್ಲೂ ರೈತರೇ ನಮ್ಮ ಅಭಿವೃದ್ಧಿ ಕಾರ್ಯಕ್ರಮಗಳ ಕೇಂದ್ರ ಬಿಂದುವಾಗಿರುತ್ತಾರೆ. ರೈತರ ಸಮಸ್ಯೆಗಳತ್ತ ಗಮನ ಹರಿಸಿ ಅವರ ಸಮಗ್ರ ಅಭಿವೃದ್ಧಿಯನ್ನು ಕೈಗೊಳ್ಳಲು ನಿರ್ಧರಿಸಿದ್ದೇನೆ. ಈ ಉದ್ದೇಶಕ್ಕಾಗಿ ಕೃಷಿ ಮಿಷನ್ ತಂಯಾರಿಸಿದ ವರದಿಯನ್ನು ಮತ್ತು ವಿಷನ್ 2020 ವರದಿಯನ್ನು ಬಳಸಿಕೊಳ್ಳಲಾಗುವುದು.

18) ದೇಶದಲ್ಲೇ ಪ್ರಪ್ರಥಮವಾಗಿ ವಿದ್ಯುತ್ ಉತ್ಪಾದಿಸಿದ ನಮ್ಮ ರಾಜ್ಯದಲ್ಲಿ ಪ್ರಸ್ತುತ ವಿದ್ಯುತ್ ಅಭಾವ ತೀವ್ರವಾಗಿರುವುದು ದುರದೃಷ್ಟಕರ. ಅಸಮರ್ಪಕ ಯೋಜನೆ ಮತ್ತು ವಿದ್ಯುಚ್ಛಕ್ತಿ ಪೂರೈಕೆಗಾಗಿ ಹೆಚ್ಚುತ್ತಿರುವ ಬೇಡಿಕೆಗಳು ಪ್ರಸ್ತುತ ಸ್ಥಿತಿಗೆ ದಾರಿಮಾಡಿಕೊಟ್ಟಿರುವ ಕಾರಣಗಳಾಗಿವೆ. ನನ್ನ ಸರ್ಕಾರ ಈ ಹಿಂದೆ ಘೋಷಿಸಿದಂತೆ ಮುಂದಿನ 5 ವರ್ಷಗಳಲ್ಲಿ 5,000 ಮೆ.ವಾ. ವಿದ್ಯುತ್ ಉತ್ಪಾದನೆಗೆ ಯೋಜನೆ ರೂಪಿಸುವಲ್ಲಿ ಮಹತ್ವದ ಪ್ರಗತಿಯನ್ನು ಸಾಧಿಸಿದೆ. ಛತ್ತೀಸಘಡದ ಕಲ್ಲಿದ್ದಲು ನಿಕ್ಷೇಪಗಳ ಸಮೀಪ ಮೊದಲನೆ ಹಂತದಲ್ಲಿ 1,200 ಮೆ.ವಾ. ಸೇರಿದಂತೆ ಒಟ್ಟು 2,400 ಮೆ.ವಾ. ಉಷ್ಣ ಸ್ಥಾವರವನ್ನು ಸ್ಥಾಪಿಸಲು ಛತ್ತೀಸಘಡ ಸರ್ಕಾರದ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಈಗಾಗಲೇ ರಾಯಪುರದಲ್ಲಿ ಕೆ.ಪಿ.ಸಿ.ಎಲ್. ಕಛೇರಿಯೊಂದನ್ನು ಸ್ಥಾಪಿಸಲಾಗಿದ್ದು, 1,200 ಎಕರೆಯಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಪ್ರಾರಂಭವಾಗಿದೆ.

19) ಬಿಜಾಪುರದ ಕೂಡಗಿಯಲ್ಲಿ 4,000 ಮೆ.ವಾ. ಉಷ್ಣ ಸ್ಥಾವರ ಸ್ಥಾಪನೆಗೆ ಕಳೆದ ವಾರ ಎನ್.ಟಿ.ಪಿ.ಸಿ. ಜೊತೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ರಾಯಚೂರು ಜಿಲ್ಲೆಯಲ್ಲಿ 2,400 ಮೆ.ವಾ. ಸಾಮರ್ಥ್ಯದ ವಿದ್ಯುತ್ ಸ್ಥಾವರ ಸ್ಥಾಪನೆಗಾಗಿ ಬಿ.ಹೆಚ್.ಇ.ಎಲ್. ಮತ್ತು ಕೆ.ಪಿ.ಸಿ.ಎಲ್ ನಡುವೆ ಮತ್ತೊಂದು ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿದೆ. ಜೊತೆಗೆ 500 ಮೆ.ವಾ. ಸಾಮರ್ಥ್ಯದ ಪವನ ವಿದ್ಯುತ್ ಸ್ಥಾವರ ಸ್ಥಾಪನೆಗೆ ಸಹ ಎನ್.ಟಿ.ಪಿ.ಸಿ. ಗೆ ಅನುಮೋದನೆ ನೀಡಲಾಗಿದೆ. ಇವು ನಿಜವಾಗಿಯೂ ಐತಿಹಾಸಿಕ ತೀರ್ಮಾನಗಳಾಗಿದ್ದು ಇಂದಿನಿಂದ 4–5 ವರ್ಷಗಳಲ್ಲಿ ರಾಜ್ಯದ ವಿದ್ಯುತ್ ಅಭಾವವನ್ನು ನೀಗಿಸಲು ಸಹಾಯಕವಾಗುತ್ತದೆ.

20) ಪ್ರಸಕ್ತ ಸಾಲಿನಲ್ಲಿ ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿ 500 ಮೆ.ವಾ. ಸಾಮರ್ಥ್ಯದ ಪ್ರಥಮ ಘಟಕ ಕಾರ್ಯಾರಂಭ ಮಾಡಿದೆ. ಈ ವರ್ಷಕ್ಕೆ ನಿಗದಿಪಡಿಸಿದ 1000 ಮೆ.ವಾ.ನ ಹೆಚ್ಚುವರಿ ವಿದ್ಯುತ್ ಉತ್ಪಾದನೆಯ ಗುರಿಯಲ್ಲಿ 910 ಮೆ.ವಾ. ನಷ್ಟು ಜಲವಿದ್ಯುತ್ ಮತ್ತು ನವೀಕರಿಸಬಹುದಾದ ಇಂಧನವನ್ನು ಸೃಜಿಸಲಾಗಿದೆ.

21) ವಿದ್ಯುತ್ ಕೊರತೆಯ ಪರಿಸ್ಥಿತಿಯಲ್ಲೂ ಆಶ್ವಾಸನೆ ನೀಡಿದಂತೆ 10 ಹೆಚ್.ಪಿ.ಯ ಎಲ್ಲಾ ನೀರಾವರಿ ಪಂಪ್‌ಸೆಟ್‌ಗಳಿಗೆ ದಿನಾಂಕ 1-08-2008 ರಿಂದ ಉಚಿತ ವಿದ್ಯುತ್ ನೀಡಲಾಗುತ್ತಿದೆ. ರಾಜ್ಯದ ಹೊರಗಿನಿಂದ ಮತ್ತು ಸ್ವತಂತ್ರ್ಯ ವಿದ್ಯುತ್ ಉತ್ಪಾದಕರಿಂದ ಸುಮಾರು ರೂ. 400 ಕೋಟಿಗೂ ಹೆಚ್ಚಿನ ವೆಚ್ಚದಲ್ಲಿ ವಿದ್ಯುತ್ ಖರೀದಿ ಮಾಡಲಾಗುತ್ತಿದೆ. ಗ್ರಾಮೀಣ ಪ್ರದೇಶಗಳಿಗೂ ನಿರಂತರ ವಿದ್ಯುತ್ ಒದಗಿಸುವ ದೃಷ್ಟಿಯಿಂದ ಮಾಲೂರು ತಾಲ್ಲೂಕಿನಲ್ಲಿ ಪ್ರತ್ಯೇಕ ಫೀಡರ್ ಸ್ಥಾಪಿಸಿ ನಿರಂತರ ವಿದ್ಯುತ್ ಒದಗಿಸುವ ಒಂದು ವಿಶೇಷ ಯೋಜನೆಯನ್ನು ಪ್ರಾಯೋಗಿಕವಾಗಿ ರೂ. 18.67 ಕೋಟಿ ಖರ್ಚಿನಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಕುಷ್ಟಗಿ, ಬೈಲಹೊಂಗಲ, ಮಳವಳ್ಳಿ ತಾಲ್ಲೂಕುಗಳಲ್ಲೂ ಸಹ ನಿರಂತರ ವಿದ್ಯುತ್ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕಾಗಿದೆ. ಉಳಿದ ತಾಲ್ಲೂಕುಗಳಲ್ಲೂ ಹಂತ ಹಂತವಾಗಿ ಈ ಯೋಜನೆಯನ್ನು ಜಾರಿಗೆ ತರಲಾಗುವುದು.

ಸರ್ವರಿಗೂ ಶಿಕ್ಷಣ :-

22) ಈ ವರ್ಷ ಸರ್ವ ಶಿಕ್ಷಣ ಅಭಿಯಾನಕ್ಕೆ ಇಲ್ಲಿಯವರೆಗೆ ಈಗಾಗಲೇ ರೂ. 505 ಕೋಟಿ ಖರ್ಚು ಮಾಡಲಾಗಿದೆ. ಈ ಯೋಜನೆಗೆ 35 ಪ್ರತಿಶತ ಹೆಚ್ಚುವರಿ ಅನುದಾನವನ್ನು ನೀಡಲಾಗುತ್ತಿದೆ. 6,500 ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಚಾಲನೆ ಕೊಡಲಾಗಿದೆ. ಹಿಂದುಳಿದ ತಾಲ್ಲೂಕುಗಳ ಶಾಲೆಗಳ ಮೂಲ ಸೌಲಭ್ಯಕ್ಕಾಗಿ ರೂ. 40 ಕೋಟಿ ಬಿಡುಗಡೆ ಮಾಡಲಾಗಿದೆ.

23) ಉನ್ನತ ಶಿಕ್ಷಣ ಕೈಗೊಳ್ಳುವ ವಿದ್ಯಾರ್ಥಿಗಳಿಗೆ ಶೇ. 6ರ ಕಡಿಮೆ ಬಡ್ಡಿ ದರದಲ್ಲಿ ರೂ. 5.0 ಲಕ್ಷದವರೆಗೆ ಸಾಲ ನೀಡುವ ಯೋಜನೆಯನ್ನು ಜಾರಿಗೆ ತರಲಾಗಿದೆ. ಬೆಂಗಳೂರಿನಲ್ಲಿ ಸಂಸ್ಕೃತ ಮತ್ತು ವೇದ ವಿಶ್ವವಿದ್ಯಾನಿಲಯ ಮತ್ತು ಮೈಸೂರಿನಲ್ಲಿ ಸಂಗೀತ ನೃತ್ಯ ವಿಶ್ವವಿದ್ಯಾನಿಲಯ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗಿದೆ. ಹುಬ್ಬಳ್ಳಿಯಲ್ಲಿ ಕಾನೂನು ವಿಶ್ವವಿದ್ಯಾನಿಲಯ ಸ್ಥಾಪನೆಗೆ ಆದ್ಯಾದೇಶ ಹೊರಡಿಸಲಾಗಿದ್ದು, ಇದೇ ಅಧಿವೇಶನದಲ್ಲಿ ಆ ಆದ್ಯಾದೇಶದ ಸ್ಥಾನದಲ್ಲಿ ವಿಧೇಯಕವನ್ನು ಮಂಡಿಸಲಾಗುತ್ತಿದೆ.

ಡಾ॥ ಅಂಬೇಡ್ಕರ್ ಪೀಠ ಸ್ಥಾಪನೆಗೆ ಗುಲ್ಬರ್ಗಾ ವಿಶ್ವವಿದ್ಯಾನಿಲಯಕ್ಕೆ ವಿಶೇಷ ಅನುದಾನ ಮಂಜೂರು ಮಾಡಿದೆ.

24) ಜ್ಞಾನ ಆಯೋಗವನ್ನು, ಪ್ರಾಯಶಃ ದೇಶದಲ್ಲಿಯೇ ಪ್ರಪ್ರಥಮ ಬಾರಿಗೆ, ರಾಜ್ಯ ಮಟ್ಟದಲ್ಲಿ ರಚಿಸಲಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಅಭಿವೃದ್ಧಿಗೆ ಹೆಚ್ಚು ಪ್ರೋತ್ಸಾಹ ಕೊಡಲು ವಿಷನ್ ಗ್ರೂಪ್ ರಚಿಸಲಾಗಿದೆ.

ಆರೋಗ್ಯ ಸೇವೆಗಳು :-

25) ತುರ್ತು ಆರೋಗ್ಯ ಸೇವೆಗಳನ್ನು ಒದಗಿಸುವುದಕ್ಕಾಗಿ **"ಆರೋಗ್ಯ ಕವಚ"** ಯೋಜನೆಯನ್ನು ಪ್ರಾರಂಭಿಸಲಾಗಿದೆ. 2010 ರ ವೇಳೆಗೆ ರಾಜ್ಯಾದ್ಯಂತ 517 ಆಂಬ್ಯುಲೆನ್ಸ್‌ಗಳನ್ನು ಒದಗಿಸಬೇಕಾಗಿದೆ. ಎಲ್ಲಾ ವೈದ್ಯಕೀಯ ಸೌಲಭ್ಯವಿರುವ 77 ಆಂಬ್ಯುಲೆನ್ಸ್‌ಗಳು ಈಗಾಗಲೇ ಸೇವಾ ನಿರತವಾಗಿದ್ದು ಶುಲ್ಕರಹಿತ **"108"** ದೂರವಾಣಿ ಸಂಖ್ಯೆಗೆ ಕರೆ ಮಾಡಿ ಈ ಆಂಬ್ಯುಲೆನ್ಸ್‌ಗಳ ಸೇವೆಗಳನ್ನು ಪಡೆಯಬಹುದಾಗಿದೆ. ತಾಯಂದಿರ ಮತ್ತು ಶಿಶುಗಳ ಮರಣ ಪ್ರಮಾಣವನ್ನು ಕಡಿಮೆಗೊಳಿಸುವ ಉದ್ದೇಶದಿಂದ **"ತಾಯಿ ಭಾಗ್ಯ"** ಯೋಜನೆಯನ್ನು ಜಾರಿಗೊಳಿಸಲಾಗಿದೆ.

26) ಹುಬ್ಬಳ್ಳಿ ಮತ್ತು ಬಳ್ಳಾರಿಗಳಲ್ಲಿ ಪರೀಕ್ಷಾ ಪ್ರಯೋಗಾಲಯಗಳನ್ನು ಗುಲ್ಬರ್ಗಾ, ಬೀದರ್, ಬಿಜಾಪುರ, ಬಾಗಲಕೋಟೆ, ಕಾರವಾರ, ಚಿತ್ರದುರ್ಗ, ಚಾಮರಾಜನಗರ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಡಯಾಲಿಸಿಸ್ ಘಟಕಗಳನ್ನು ಸ್ಥಾಪಿಸಲಾಗಿದೆ. ಗುಲ್ಬರ್ಗಾ, ಬೀದರ್, ಬಿಜಾಪುರ, ಬಾಗಲಕೋಟೆ, ಶಿವಮೊಗ್ಗ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸುಟ್ಟ ಗಾಯಗಳ ವಾರ್ಡ್‌ಗಳ ಸ್ಥಾಪನೆಗೆ ಚಾಲನೆ ನೀಡಲಾಗಿದೆ. ಬೆಂಗಳೂರಿನ ಇಂದಿರಾನಗರದಲ್ಲಿ ಹೊಸ ಸಾರ್ವಜನಿಕ ಆಸ್ಪತ್ರೆಯ ನಿರ್ಮಾಣಕ್ಕಾಗಿ ಗುಲ್ಬರ್ಗಾ ಮತ್ತು ಚಾಮರಾಜನಗರಗಳಲ್ಲಿ ಜಿಲ್ಲಾ ಆಸ್ಪತ್ರೆಗಳ ನಿರ್ಮಾಣಕ್ಕಾಗಿ ಬೀದರ್, ಬೆಳಗಾವಿ, ರಾಯಚೂರು, ಶಿವಮೊಗ್ಗ, ಹಾಸನ ಮತ್ತು ಮಂಡ್ಯದಲ್ಲಿ ವೈದ್ಯಕೀಯ ಕಾಲೇಜು ಕಟ್ಟಡಗಳ ನಿರ್ಮಾಣಕ್ಕಾಗಿ ಅಗತ್ಯ ಅನುದಾನ ಬಿಡುಗಡೆ ಮಾಡಲಾಗಿದೆ.

27) ರಾಜ್ಯದ ಪ್ರತಿಯೊಂದು ಬಡ ಕುಟುಂಬಕ್ಕೂ ಉತ್ಕೃಷ್ಟ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ ಆರೋಗ್ಯ ವಿಮೆಯ ಮೂಲಕ ಗರಿಷ್ಠ ರೂ. 1.5 ಲಕ್ಷ ವರೆಗಿನ ವೈದ್ಯಕೀಯ ವೆಚ್ಚವನ್ನು ಭರಿಸುವ ಯೋಜನೆಯನ್ನು ತಯಾರಿಸಲಾಗುತ್ತಿದೆ. ಮೊದಲ ಹಂತದಲ್ಲಿ ಗುಲ್ಬರ್ಗಾ ವಿಭಾಗದ ಸುಮಾರು 16 ಲಕ್ಷ ಬಡ ಕುಟುಂಬಗಳನ್ನು

ಮತ್ತು ನಂತರದ ವರ್ಷದಲ್ಲಿ ರಾಜ್ಯದ ಎಲ್ಲಾ ಬಡ ಕುಟುಂಬಗಳನ್ನು ಈ ಯೋಜನೆಯ ವ್ಯಾಪ್ತಿಗೆ ತರಲು ಉದ್ದೇಶಿಸಲಾಗಿದೆ.

ಸಾಮಾಜಿಕ ಅಭಿವೃದ್ಧಿ ಎಲ್ಲರಿಗೂ ಸಮಾನ ಅವಕಾಶಗಳು :-

28) ಈವರೆಗೆ ರಾಜ್ಯಾದ್ಯಂತ ಬಡತನ ರೇಖೆಗಿಂತ ಕೆಳಗಿನ 78 ಲಕ್ಷ ಕುಟುಂಬಗಳಿಗೆ ಪಡಿತರ ಚೀಟಿಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗಿದೆ. ಕೈಬಿಟ್ಟಿರುವ ಅಥವಾ ಇನ್ನೂ ಗುರುತಿಸದಿರುವ ಎಲ್ಲಾ ಬಡಕುಟುಂಬಗಳನ್ನು ಈ ಸೌಲಭ್ಯದ ವ್ಯಾಪ್ತಿಗೆ ತರಲು ಆದಷ್ಟು ಬೇಗ ನಿರ್ದಿಷ್ಟ ಕ್ರಮ ತೆಗೆದುಕೊಳ್ಳಲಾಗುವುದು.

29) ಭಾಗ್ಯಲಕ್ಷ್ಮಿ ಯೋಜನೆಯಡಿಯಲ್ಲಿ ಈ ವರ್ಷ ಇದುವರೆವಿಗೂ ರೂ. 148 ಕೋಟಿಗಳನ್ನು ಖರ್ಚು ಮಾಡಿದ್ದು ಒಟ್ಟು 1.48 ಲಕ್ಷ ಹೆಣ್ಣು ಶಿಶುಗಳಿಗೆ ರೂ. 10,000 ಮೌಲ್ಯವಿರುವ ಬಾಂಡ್‌ಗಳನ್ನು ನೀಡಲಾಗಿದೆ. ಮಾರ್ಪಾಟಿತ ಯೋಜನೆಯಂತೆ ಆಗಸ್ಟ್ 1, 2008 ರ ನಂತರ ಹುಟ್ಟಿದ ಹೆಣ್ಣು ಮಕ್ಕಳಿಗೆ ರೂ. 1 ಲಕ್ಷ ಮೆಚ್ಯುರಿಟಿ ಮೌಲ್ಯವನ್ನು ಹೊಂದಿರುವ ಬಾಂಡ್‌ಗಳನ್ನು ನೀಡುವ ಪ್ರಕ್ರಿಯೆ ಪ್ರಾರಂಭವಾಗಿದೆ. ಸಂಧ್ಯಾ ಸುರಕ್ಷಾ ಯೋಜನೆಯಡಿ 3.5 ಲಕ್ಷಕ್ಕೂ ಹೆಚ್ಚಿನ ಹಿರಿಯ ನಾಗರಿಕರಿಗೆ ಮಾಸಾಶನವನ್ನು ವಿತರಿಸಲಾಗುತ್ತಿದೆ.

30) ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ನೆಮ್ಮದಿ ಟೆಲಿಸೆಂಟರ್‌ಗಳ ಮೂಲಕ ಉದ್ಯೋಗ ತರಬೇತಿ ನೀಡಲಾಗುತ್ತಿದೆ. ಹೊಸದಾಗಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗಾಗಿ 119 ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ 174 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗಿದೆ. ಒಟ್ಟಾರೆ 17,000 ವಿದ್ಯಾರ್ಥಿಗಳು ಇದರಿಂದ ಪ್ರಯೋಜನ ಪಡೆದಿದ್ದಾರೆ.

31) ಶೇಕಡ 75 ಕ್ಕಿಂತ ಹೆಚ್ಚಿನ ಪ್ರಮಾಣದ ಅಂಗವಿಕಲರ ಮಾಸಾಶನ ರೂ. 1000 ಕ್ಕೆ ಹೆಚ್ಚಿಸಲಾಗಿದ್ದು, ಈ ಹೊಸ ಯೋಜನೆ ಅಡಿಯಲ್ಲಿ 5500 ಅಂಗವಿಕಲರಿಗೆ ಪ್ರಯೋಜನವಾಗಿದೆ. ಸರ್ಕಾರೇತರ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿರುವ ಅಂಗವಿಕಲರ ಮಕ್ಕಳ ವಿಶೇಷ ಶಾಲೆಗಳಲ್ಲಿನ ಮಕ್ಕಳ ನಿರ್ವಹಣಾ ವೆಚ್ಚವನ್ನು ರೂ. 600 ಕ್ಕೆ ಏರಿಸಲಾಗಿದೆ.

32) ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ 25 ಹೊಸ ವಿದ್ಯಾರ್ಥಿಗಳಿಗೆ ಮಂಜೂರಾತಿ ನೀಡಲಾಗಿದೆ ಮತ್ತು ಈಗಾಗಲೇ 8 ವಿದ್ಯಾರ್ಥಿಗಳು ಕಾರ್ಯ ಪ್ರಾರಂಭಿಸಿವೆ. ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ವಿವಿಧ ಯೋಜನೆಗಳಡಿ 17,894 ಫಲಾನುಭವಿಗಳಿಗೆ ರೂ. 23 ಕೋಟಿ ಸಾಲ ನೀಡಲಾಗಿದೆ.

33) ವಕ್ಫ್ ಆಸ್ತಿಗಳಿಗೆ ಸಂಬಂಧಿಸಿದ ದಸ್ತಾವೇಜುಗಳ ಸಂರಕ್ಷಣೆಗೆ ದಾಖಲೆಗಳ ಗಣಕೀಕರಣ ಕಾರ್ಯ ಕೈಗೊಳ್ಳಲಾಗಿದೆ. ವಕ್ಫ್ ಆಸ್ತಿಗಳ ಅತಿಕ್ರಮಣವನ್ನು ತೆರವುಗೊಳಿಸುವುದಕ್ಕಾಗಿ ಉನ್ನತ ಮಟ್ಟದ ಕಾರ್ಯಪಡೆ ರಚಿಸಲಾಗಿದೆ.

ಗ್ರಾಮೀಣ ಅಭಿವೃದ್ಧಿ :-

34) ಕರ್ನಾಟಕವು ಪ್ರಧಾನಮಂತ್ರಿ ಗ್ರಾಮಸಡಕ್ ಯೋಜನೆಯಡಿಯ ರಸ್ತೆ ಅಭಿವೃದ್ಧಿ ಯೋಜನೆಯ ಅನುಷ್ಠಾನದಲ್ಲಿ ದೇಶದಲ್ಲಿಯೇ ದ್ವಿತೀಯ ಸ್ಥಾನದಲ್ಲಿದೆ. ಗುಣಮಟ್ಟದಲ್ಲಿ ರಾಜ್ಯವು ದೇಶದಲ್ಲಿಯೇ ಉತ್ತಮವೆಂದು ನಿರ್ಣಯಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ರೂ. 205 ಕೋಟಿ ವೆಚ್ಚದಲ್ಲಿ 831 ಕಿ.ಮೀ. ರಸ್ತೆ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ಗ್ರಾಮಗಳಲ್ಲಿ ಮತ್ತು ವಿಶೇಷವಾಗಿ ಗ್ರಾಮೀಣ ಶಾಲೆಗಳಲ್ಲಿ ರೂ. 515 ಕೋಟಿ ವೆಚ್ಚದಲ್ಲಿ ಶುದ್ಧ ಕುಡಿಯುವ ನೀರಿನ ಯೋಜನೆಗಳನ್ನು ಕೈಗೊಳ್ಳಲಾಗಿದೆ.

35) ಪ್ರಸಕ್ತ ಸಾಲಿನಲ್ಲಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 29.52 ಲಕ್ಷ ಗ್ರಾಮೀಣ ಕುಟುಂಬಗಳಿಗೆ ಉದ್ಯೋಗ ಚೀಟಿ ವಿತರಿಸಲಾಗಿದೆ. ಜಿಲ್ಲಾ ಪಂಚಾಯತಿಗಳಿಗೆ ಸುವರ್ಣ ಗ್ರಾಮೋದಯ ಯೋಜನೆಯಡಿ ರೂ. 242 ಕೋಟಿ ಅನುದಾನ ನೀಡಲಾಗಿದೆ. ರೂ. 208 ಕೋಟಿ ಅಂದಾಜು ವೆಚ್ಚದಲ್ಲಿ ಗುಲ್ಬರ್ಗಾ ಕಂದಾಯ ವಿಭಾಗದ ಸುಮಾರು 200 ಗ್ರಾಮಗಳ ಅಭಿವೃದ್ಧಿಗೆ ಮತ್ತು ಈ ಯೋಜನೆಯಡಿ 1000 ಗ್ರಾಮಗಳ ಸೇರ್ಪಡೆಗೆ ಅನುಮೋದನೆ ನೀಡಲಾಗಿದೆ.

ರಾಜ್ಯಾದ್ಯಂತ ರಸ್ತೆ ಸಂಪರ್ಕ ಜಾಲ :

36) ರಾಜ್ಯದ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗೆ ರಸ್ತೆಗಳ ಅಭಿವೃದ್ಧಿ ಅತ್ಯಗತ್ಯ. ನಮ್ಮ ರಾಜ್ಯದಲ್ಲಿ ರಸ್ತೆಗಳ ಸಂಪರ್ಕಜಾಲ ಮತ್ತು ಗುಣಮಟ್ಟವು ನಿಗಧಿತ ಮಟ್ಟವನ್ನು ತಲುಪದೆ ಇರುವುದರಿಂದ ರಾಜ್ಯಾದ್ಯಂತ ಗುಣಮಟ್ಟದ ರಸ್ತೆ ಸಂಪರ್ಕ ಅಭಿವೃದ್ಧಿಪಡಿಸಲು ಒಂದು ಸಮಗ್ರ ಯೋಜನೆ ತಯಾರಿಸುವ ಅವಶ್ಯವಿದೆ. ಮೊದಲ ಹಂತದಲ್ಲಿ 10,000 ಕಿ.ಮೀಗಳ ರಸ್ತೆಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ, ಮತ್ತು ರಸ್ತೆಗಳ

ಅಭಿವೃದ್ಧಿಗಾಗಿ ಹೊಸ ರಾಜ್ಯ ನೀತಿಯನ್ನು ಅಳವಡಿಸಿಕೊಳ್ಳಲಾಗಿದೆ. ಮುಂದಿನ ಹಂತಗಳಲ್ಲಿ ಹಾಗೂ ಯೋಜನೆಗಳಲ್ಲಿ ಉಳಿದ 56,000 ಕಿ.ಮೀ ರಸ್ತೆಗಳ ಅಭಿವೃದ್ಧಿ ಕೈಗೊಳ್ಳಲಾಗುವುದು. ಯೋಜನಾ ಆಯೋಗದ ಮಾರ್ಗಸೂಚಿಗಳಂತೆ ಖಾಸಗಿ ಸಹಭಾಗಿತ್ವದಲ್ಲಿ ಈ ರಸ್ತೆಗಳನ್ನು ಕೈಗೆತ್ತಿಕೊಳ್ಳಲಾಗುವುದು. ಇದೇ ಮಾದರಿಯಲ್ಲಿ ರಾಜ್ಯಾದ್ಯಂತ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ರಾಜ್ಯವ್ಯಾಪಿ ಆರಂಭಿಕ ಕ್ರಮವನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ, ಮತ್ತು ಆದ್ಯತೆಯ ಮೇರೆಗೆ ಸಂಘಟಿತ ಕ್ರಮ ತೆಗೆದುಕೊಳ್ಳುವ ಬಗ್ಗೆ ಯೋಜಿಸಲಾಗುತ್ತಿದೆ.

37) ಲೋಕೋಪಯೋಗಿ ಇಲಾಖೆಯಿಂದ ಪ್ರಸಕ್ತ ಸಾಲಿನಲ್ಲಿ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ರೂ. 1,000 ಕೋಟಿಗೂ ಹೆಚ್ಚು ಹಣವನ್ನು ವಿನಿಯೋಗಿಸಲಾಗಿದೆ. ಕೆಶಿಪ್ ಮತ್ತು ಕೆ.ಆರ್.ಡಿ.ಸಿ.ಎಲ್. ಮುಖಾಂತರ ರಸ್ತೆ ಅಭಿವೃದ್ಧಿ ಕಾರ್ಯವನ್ನು ಇನ್ನೂ ಚುರುಕುಗೊಳ್ಳಬೇಕಾಗಿದೆ. ರಸ್ತೆಗಳ ಗುಣಮಟ್ಟ ನಿಯಂತ್ರಣಕ್ಕೆ ವಿಶೇಷ ಕಾರ್ಯಪಡೆಯನ್ನು ರಚಿಸಲಾಗಿದೆ.

<u>ವಸತಿ :-</u>

38) ಈ ವರ್ಷದಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ಒಂದು ಲಕ್ಷಕ್ಕಿಂತ ಹೆಚ್ಚಿನ ಮನೆಗಳನ್ನು ಪೂರ್ಣಗೊಳಿಸಲಾಗಿದೆ. ನನ್ನ ಸರ್ಕಾರವು ಈ ವರ್ಷ ಮನೆಗಳ ಘಟಕ ವೆಚ್ಚವನ್ನು ರೂ. 30,000 ದಿಂದ ರೂ. 40,000 ಗಳಿಗೆ ಏರಿಸಿದೆ. ಜೊತೆಗೆ 2.0 ಲಕ್ಷ ಹೊಸ ಫಲಾನುಭವಿಗಳ ಆಯ್ಕೆಯ ಪ್ರಕ್ರಿಯೆ ಪ್ರಾರಂಭಿಸಲಾಗಿದೆ. ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ಸುಮಾರು 13,000 ಮನೆಗಳ ನಿರ್ಮಾಣ ಕಾರ್ಯ ಪ್ರಾರಂಭಿಸಲಾಗಿದ್ದು ಇವು ಮುಕ್ತಾಯದ ವಿವಿಧ ಹಂತದಲ್ಲಿವೆ.

<u>ಸಂಪರ್ಕ ಸುಧಾರಣೆ :-</u>

39) ಎಲ್ಲಾ ಜಿಲ್ಲಾ ಕೇಂದ್ರಗಳಿಗೆ ವಾಯುಯಾನ ಸಂಪರ್ಕ ಕಲ್ಪಿಸಲು ಸರ್ಕಾರ ಬದ್ಧವಾಗಿದ್ದು, ಈ ದಿಶೆಯಲ್ಲಿ ಕ್ರಮ ಪ್ರಾರಂಭಿಸಲಾಗಿದೆ. ಪಿಪಿಪಿ ಮಾದರಿಯಲ್ಲಿ ಬಿಜಾಪುರ ವಿಮಾನ ನಿಲ್ದಾಣ ಅಭಿವೃದ್ಧಿಗೆ ಮಂಜೂರಾತಿ ನೀಡಲಾಗಿದೆ. ರೂ. 3 ಕೋಟಿ ವೆಚ್ಚದಲ್ಲಿ ಬೀದರ್ ವಾಯುಪಡೆ ವಿಮಾನ ನಿಲ್ದಾಣ ಬಳಿ ರಾಜ್ಯ ಸರ್ಕಾರವೇ ಟರ್ಮಿನಲ್ ಕಟ್ಟಡ ನಿರ್ಮಿಸಿದ್ದು, ಇದರ ಕಾರ್ಯಾರಂಭಕ್ಕೆ ಕೇಂದ್ರದ ಅನುಮತಿ

ಕಾಯಲಾಗುತ್ತಿದೆ. ದಾವಣಗೆರೆ, ಬಾಗಲಕೋಟೆ, ಕುಶಾಲನಗರ, ರಾಯಚೂರು ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ವಿಮಾನ ಇಳಿದಾಣಗಳ ನಿರ್ಮಾಣಕ್ಕೆ ಪ್ರಾಥಮಿಕ ತಯಾರಿ ಕಾರ್ಯಗಳು ನಡೆಯುತ್ತಿವೆ. ಮೈಸೂರು ವಿಮಾನ ನಿಲ್ದಾಣ ಶೀಘ್ರದಲ್ಲೇ ಕಾರ್ಯಾರಂಭ ಮಾಡುವ ನಿರೀಕ್ಷೆ ಇದೆ. ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಅಡಿಯಲ್ಲಿ ಗುಲ್ಬರ್ಗಾ, ಶಿವಮೊಗ್ಗ ಮತ್ತು ಹಾಸನದಲ್ಲಿ ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿಗೊಳಿಸಲು ಕ್ರಮಕೈಗೊಳ್ಳಲಾಗಿದೆ.

40) ಬಹುದಿನಗಳಿಂದ ನಿರ್ಮಾಣದ ಹಂತದಲ್ಲಿದ್ದ ಗದಗ–ಸೊಲ್ಲಾಪುರ ಬ್ರಾಡ್‌ಗೇಜ್ ರೇಲ್ವೆ ಮಾರ್ಗ ಪೂರ್ಣಗೊಂಡು ಸಂಚಾರಕ್ಕೆ ಮುಕ್ತವಾಗಿದೆ. ರೈಲ್ವೆ ಮಂತ್ರಾಲಯ ಹಾಗೂ ರಾಜ್ಯದ ನಡುವಿನ ವೆಚ್ಚ ಹಂಚಿಕೆಯ ಆಧಾರದಲ್ಲಿ ಐದು ರೈಲ್ವೆ ಯೋಜನೆಗಳು ಪ್ರಗತಿಯಲ್ಲಿವೆ, ಈ ಯೋಜನೆಗಳನ್ನು ಶೀಘ್ರ ಪೂರ್ಣಗೊಳಿಸುವ ನಿಟ್ಟಿನಲ್ಲಿ ರಾಜ್ಯವು ಇನ್ನು ಮುಂದೆಯೂ ತನ್ನ ಪಾಲಿನ ಹಣವನ್ನು ಒದಗಿಸುತ್ತದೆ. ಈ ಎಲ್ಲಾ ಯೋಜನೆಗಳಿಗೆ ಕೇಂದ್ರ ಸರ್ಕಾರವು ಸಮರ್ಪಕವಾಗಿ ಹಣವನ್ನು ಹಂಚಿಕೆ ಮಾಡುವುದರ ಮೂಲಕ ಈ ಎಲ್ಲ ಯೋಜನೆಗಳನ್ನು ಸಕಾಲದಲ್ಲಿ ಪೂರ್ಣಗೊಳಿಸುವುದಕ್ಕೆ ಸಹಕರಿಸಬೇಕೆಂದು ಮನವಿ ಮಾಡುತ್ತೇನೆ.

ಕೈಗಾರಿಕೆ ಮತ್ತು ಕೌಶಲ್ಯ ಅಭಿವೃದ್ಧಿ :–

41) ಜಾಗತಿಕ ಹಣಕಾಸು ಮತ್ತು ಆರ್ಥಿಕ ಹಿಂಜರಿತದ ಪರಿಣಾಮವಾಗಿ ದೇಶದ ಮತ್ತು ರಾಜ್ಯದ ಕೈಗಾರಿಕೆಗಳು ಸಂಕಷ್ಟದಲ್ಲಿರುವ ವಿಷಯವನ್ನು ಈಗಾಗಲೇ ಪ್ರಸ್ತಾಪಿಸಲಾಗಿದೆ. ಈ ಪರಿಸ್ಥಿತಿಯಲ್ಲೂ ಹೂಡಿಕೆದಾರರು ಕರ್ನಾಟಕದಲ್ಲಿ ಹೂಡಿಕೆ ಮಾಡಲು ಆಸಕ್ತಿ ತೋರುತ್ತಿದ್ದಾರೆ ಮತ್ತು ರಾಜ್ಯ ಸರ್ಕಾರವು ಒಟ್ಟು ರೂ. 36,000 ಕೋಟಿ ಬಂಡವಾಳ ಹೂಡಿಕೆಯನ್ನು ಒಳಗೊಂಡಿರುವ 282 ಹೊಸ ಕೈಗಾರಿಕೆಗಳ ಸ್ಥಾಪನೆಗೆ ಅನುಮೋದನೆ ನೀಡಿದೆ. ಇದರಿಂದ 5 ಲಕ್ಷ ಜನರಿಗೆ ಉದ್ಯೋಗ ಕಲ್ಪಿಸುವ ನಿರೀಕ್ಷೆ ಇದೆ.

42) ರಾಜ್ಯದಲ್ಲಿ ಉದ್ಯೋಗಾವಕಾಶಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಕೌಶಲ್ಯ ಅಭಿವೃದ್ಧಿ ನಿಗಮವನ್ನು ರಚಿಸಲಾಗಿದೆ. ಈ ಮೂಲಕ ಇತ್ತೀಚೆಗೆ ಬೆಂಗಳೂರು, ಹುಬ್ಬಳ್ಳಿ ಮತ್ತು ಮೈಸೂರಿನಲ್ಲಿ ನಡೆದ ಉದ್ಯೋಗ ಮೇಳಗಳಲ್ಲಿ ಒಟ್ಟು 41,000 ಕ್ಕಿಂತ ಹೆಚ್ಚಿನ ಉದ್ಯೋಗಾಕಾಂಕ್ಷಿಗಳು ಪಾಲ್ಗೊಂಡಿದ್ದರು. ಈ ಉದ್ಯೋಗ ಮೇಳಗಳ ಮುಖಾಂತರ 10,000 ಕ್ಕೂ ಅಧಿಕ ಅಭ್ಯರ್ಥಿಗಳು 224 ಉದ್ದಿಮೆಗಳಲ್ಲಿ ಕೆಲಸಕ್ಕೆ

ಆಯ್ಕೆಯಾಗಿದ್ದಾರೆ. 15,500 ಆಯ್ದ ಅಭ್ಯರ್ಥಿಗಳಿಗೆ ತರಬೇತಿ ಮತ್ತು ಕೌಶಲ್ಯ ನೀಡಲು ವ್ಯವಸ್ಥೆಗಳನ್ನು ಸಹ ಮಾಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಈವರೆಗೂ 9 ಹೊಸ ಕೈಗಾರಿಕಾ ತರಬೇತಿ ಸಂಸ್ಥೆಗಳು ಕಾರ್ಯಾರಂಭ ಮಾಡಿವೆ.

43) ಈ ವರ್ಷ ನನ್ನ ಸರ್ಕಾರವು ಹೊಸ ವಸ್ತ್ರ ನೀತಿಯನ್ನು ಜಾರಿಗೆ ತಂದಿದೆ. ಈ ನೀತಿಯ ಅನುಸಾರ ವಸ್ತ್ರ ಕೈಗಾರಿಕೆಗೆ ಉತ್ತೇಜನ ನೀಡಲು ರೂ. 25 ಕೋಟಿಗಳ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಜೊತೆಗೆ ರಾಜ್ಯದಲ್ಲಿ ದ್ರಾಕ್ಷಿ ಬೆಳೆಯುವ ರೈತರಿಗೆ ಅನುಕೂಲವಾಗುವ ದಿಕ್ಕಿನಲ್ಲಿ ರಾಜ್ಯ ಸರ್ಕಾರವು ಒಂದು ನೀತಿಯನ್ನು ಜಾರಿಗೆ ತಂದಿದೆ.

44) ರಾಜ್ಯದ ಅಭಿವೃದ್ಧಿಗೆ ಕೈಗಾರಿಕೀಕರಣಕ್ಕೆ ಉತ್ತೇಜನ ನೀಡುವುದು ಅತ್ಯಗತ್ಯ. ಕೃಷಿ ಕಾರ್ಯದಲ್ಲಿ ತೊಡಗಿರುವವರಿಗೆ ಕೈಗಾರಿಕಾ ವಲಯದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸಬೇಕಾದ ಅಗತ್ಯವಿದೆ. ಈ ದಿಶೆಯಲ್ಲಿ ಸರ್ಕಾರಕ್ಕೆ ಸಲಹೆ ಮತ್ತು ಮಾರ್ಗದರ್ಶನ ನೀಡಲು **"ವಿಷನ್‌ಗ್ರೂಪ್"** ರಚಿಸಲಾಗಿದೆ. ಇದರ ಜೊತೆಗೆ ಕೈಗಾರಿಕೆಗಳ ಹೆಚ್ಚಿನ ಅಭಿವೃದ್ಧಿ ಮತ್ತು ಉತ್ತೇಜನಕ್ಕೆ ಹೊಸ ಕೈಗಾರಿಕಾ ನೀತಿಯನ್ನು ರಚಿಸಲಾಗುತ್ತಿದೆ.

ಕನ್ನಡ ಮತ್ತು ಸಂಸ್ಕೃತಿಗೆ ಆದ್ಯತೆ :-

45) ಸಮಸ್ತ ಕನ್ನಡಿಗರ ಮತ್ತು ರಾಜ್ಯ ಸರ್ಕಾರದ ನಿರಂತರ ಮನವೊಲಿಕೆ ಫಲವಾಗಿ 1 ನೇ ನವೆಂಬರ್ 2008 ರಂದು ಕೇಂದ್ರ ಸರ್ಕಾರ ಕೊನೆಗೂ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ನೀಡಿದೆ. ರಾಜ್ಯದ ದೀರ್ಘಕಾಲದ ಬೇಡಿಕೆಯನ್ನು ಈಡೇರಿಸಿರುವುದಕ್ಕೆ ರಾಜ್ಯವು ಆಭಾರಿಯಾಗಿದೆ. ಗಡಿನಾಡ ಮುಖ್ಯ ಕೇಂದ್ರಗಳಲ್ಲಿ ಕನ್ನಡ ಭವನಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಿದೆ. ಡಾ॥ ರಾಜಕುಮಾರ್ ಸ್ಮಾರಕದ ಕಾಮಗಾರಿಗೆ ಚಾಲನೆ ನೀಡಲಾಗಿದೆ ಮತ್ತು ಅದರ ನಿರ್ಮಾಣವನ್ನು ತ್ವರಿತಗೊಳಿಸಲು ಪ್ರಸಕ್ತ ವರ್ಷದಲ್ಲಿ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ.

46) ಸಾಮಾಜಿಕ ನ್ಯಾಯದ ಹರಿಕಾರ ದಾಸಶ್ರೇಷ್ಠ ಕನಕದಾಸರನ್ನು ಗೌರವಿಸುವುದಕ್ಕೆ ಕನಕದಾಸ ಜಯಂತಿಯನ್ನು ಈ ವರ್ಷದಿಂದ ರಾಜ್ಯದಾದ್ಯಂತ ಆಚರಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಈ ಜಯಂತಿ ದಿನವನ್ನು ಸಾರ್ವತ್ರಿಕ ರಜೆಯೆಂದು ಘೋಷಿಸಲಾಗಿದೆ. ಸಂತ ಕನಕದಾಸರು ತಮ್ಮ ಬಹಳಷ್ಟು ಕೀರ್ತನೆಗಳನ್ನು ರಚಿಸಿದ

ಸ್ಥಳವಾದ ಕಾಗಿನೆಲೆ ಕ್ಷೇತ್ರದ ಅಭಿವೃದ್ಧಿಗೆ ರೂ. 10 ಕೋಟಿ ಅನುದಾನ ನೀಡಲಾಗಿದೆ. ಬಸವ ಕಲ್ಯಾಣದ ಅಭಿವೃದ್ಧಿಯನ್ನು ಕೂಡ ಕೈಗೆತ್ತಿಕೊಂಡಿದ್ದು, ಪ್ರಸಕ್ತ ಸಾಲಿನಲ್ಲಿ ಈ ಉದ್ದೇಶಕ್ಕಾಗಿ ರೂ. 11 ಕೋಟಿ ಒದಗಿಸಲಾಗಿದೆ.

47) ನಮ್ಮ ನಾಡಿನ ಸಂಗೀತ ದಿಗ್ಗಜ ಪಂಡಿತ್ ಡಾ॥ ಭೀಮಸೇನ್ ಜೋಶಿಯವರಿಗೆ **"ಭಾರತ ರತ್ನ"** ನೀಡಿರುವುದು ಕನ್ನಡಿಗರಿಗೆಲ್ಲರಿಗೂ ಅತ್ಯಂತ ಹೆಮ್ಮೆಯ ಸಂಗತಿ. ಸರ್ಕಾರವು ಕನ್ನಡ ನಾಡಿನ ಈ ಹೆಮ್ಮೆಯ ಪುತ್ರನನ್ನು ಇಷ್ಟರಲ್ಲಿಯೇ ಅರ್ಹ ರೀತಿಯಲ್ಲಿ ಗೌರವಿಸಲಿದೆ.

48) 2009 ನೇ ವರ್ಷವನ್ನು **"ಕನ್ನಡ ಅನುಷ್ಠಾನ ವರ್ಷ"** ವೆಂದು ಘೋಷಿಸಲಾಗಿದೆ ಎಂಬುದನ್ನು ನಿಮ್ಮೆಲ್ಲರಿಗೂ ತಿಳಿಸಲು ನನಗೆ ಅತೀವ ಸಂತೋಷವಾಗುತ್ತಿದೆ.

<u>ಪ್ರವಾಸಿ ತಾಣಗಳ ಅಭಿವೃದ್ಧಿ :-</u>

49) ಈ ವರ್ಷದಿಂದ ಮೈಸೂರು ದಸರಾವನ್ನು ನಾಡಹಬ್ಬವನ್ನಾಗಿ ಆಚರಿಸಲಾಗುವುದು. ಈ ಹಬ್ಬವನ್ನು ಕಳೆದ ಅಕ್ಟೋಬರ್‌ನಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಇದೇ ರೀತಿ ಹಂಪಿ ಉತ್ಸವವನ್ನೂ ಹೊಸ ಹುರುಪು ಮತ್ತು ವೈಭವದಿಂದ ಆಚರಿಸಲಾಯಿತು.

50) ಬೆಂಗಳೂರು ಹೊರವಲಯದಲ್ಲಿ ರೂ. 1,200 ಕೋಟಿ ವೆಚ್ಚದಲ್ಲಿ ಅಂತರಾಷ್ಟ್ರೀಯ ಸಮಾವೇಶ ಕೇಂದ್ರ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಲಾಗಿದೆ.

<u>ನಗರಾಭಿವೃದ್ಧಿ :-</u>

51) ರಾಜ್ಯದ 6 ಮಹಾನಗರ ಪಾಲಿಕೆಗಳಿಗೆ ತಲಾ ರೂ. 100 ಕೋಟಿ ಒದಗಿಸಲಾಗಿದ್ದು, ಇದು ನನ್ನ ಸರ್ಕಾರ ತೆಗೆದುಕೊಂಡಿರುವ ಅಭೂತಪೂರ್ವ ಕ್ರಮವಾಗಿದೆ. ಈ ಮೊತ್ತದ ಬಳಕೆಗಾಗಿ ಕ್ರಿಯಾ ಯೋಜನೆಗಳನ್ನು ರೂಪಿಸಲಾಗಿದೆ. ಪ್ರತಿಯೊಂದು ಮಹಾನಗರ ಪಾಲಿಕೆಗಳಲ್ಲಿ ಈಗಾಗಲೇ ಕಾಮಗಾರಿಗಳು ಪ್ರಾರಂಭವಾಗಿವೆ. ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ನರ್ಮ್ ಯೋಜನೆಯಡಿ ರೂ. 3,240.92 ಕೋಟಿ ವೆಚ್ಚದ 46 ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ.

52) ಬೆಂಗಳೂರಿನಲ್ಲಿ ನಮ್ಮ ಮೆಟ್ರೋ ಕಾಮಗಾರಿಯ ವೇಗವನ್ನು ಹೆಚ್ಚಿಸಲಾಗಿದ್ದು ಈ ವರ್ಷದ ಮೊದಲ 200 ದಿನಗಳಲ್ಲಿ ರೂ. 448 ಕೋಟಿ ವೆಚ್ಚ ಮಾಡಲಾಗಿದೆ. ಇದು ಈವರೆಗಿನ ಮೆಟ್ರೋ ಯೋಜನೆಯ ವೆಚ್ಚದ ಶೇಕಡ 50 ರಷ್ಟಕ್ಕೆ ಸಮನಾಗಿದೆ.

53) ಬೆಂಗಳೂರಿನಲ್ಲಿ ಕೈಗೊಳ್ಳಲಾಗುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಮಾರ್ಗದರ್ಶನ ನೀಡಲು ಮತ್ತು ಶಿಫಾರಸ್ಸುಗಳನ್ನು ಮಾಡಲು "ಬೆಂಗಳೂರು ಮೂಲ ಸೌಲಭ್ಯ ಅಭಿವೃದ್ಧಿ ಕಾರ್ಯಸೂಚಿ" (ಎಬಿಐಡಿಇ) ಎಂಬ ಒಂದು ವಿಶೇಷ ಕಾರ್ಯಪಡೆಯನ್ನು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ. ನಗರ ಅಭಿವೃದ್ಧಿಯಲ್ಲಿ ನಾಗರೀಕರ ಪಾಲ್ಗೊಳ್ಳುವಿಕೆಗೆ ಅವಕಾಶವಾಗುವಂತೆ ನಿಯಮಿತವಾಗಿ ಮತ್ತು ನಿರಂತರವಾಗಿ ಎಬಿಐಡಿಇ ಸಭೆಗಳನ್ನು ನಡೆಸಲಾಗುತ್ತಿದೆ. ಬೆಂಗಳೂರಿನ ರಸ್ತೆಗಳ ಅಭಿವೃದ್ಧಿಗೆ ಮತ್ತು ಅಗಲೀಕರಣ ಕಾರ್ಯಕ್ಕೆ ಚಾಲನೆ ನೀಡಲಾಗಿದ್ದು, 300 ಕೋಟಿ ರೂ. ವೆಚ್ಚದಲ್ಲಿ 1187 ಕ್ಕೂ ಹೆಚ್ಚು ರಸ್ತೆಗಳ ಕಾಮಗಾರಿ ಆರಂಭಿಸಲಾಗಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಗೊಂಡ ಪ್ರದೇಶಗಳಲ್ಲಿನ ಕಾಮಗಾರಿಗಳಿಗಾಗಿ ರೂ. 623 ಕೋಟಿ ಮಂಜೂರು ಮಾಡಲಾಗಿದ್ದು, ಈ ಪ್ರದೇಶಗಳಲ್ಲಿನ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತವೆ.

ಸಾರಿಗೆ :-

54) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಿಂದ ರೂ. 300 ಕೋಟಿ ವೆಚ್ಚದಲ್ಲಿ 1588 ನೂತನ ವಾಹನಗಳನ್ನು ಖರೀದಿಸಲಾಗಿದೆ. ಹಾಸನ ಹಗರಿಬೊಮ್ಮನಹಳ್ಳಿ, ವಡ್ಡರಹಳ್ಳಿ-ಕೆಂಗೇರಿ ಮತ್ತು ಹುಬ್ಬಳ್ಳಿಯಲ್ಲಿ ಭಾರಿ ವಾಹನ ಚಾಲನಾ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಮೈಸೂರು ಟ್ರಕ್ ಟರ್ಮಿನಲ್ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ.

ಆಡಳಿತ ಸುಧಾರಣೆ :-

55) ಶ್ರೇಷ್ಠ ಕವಿ ಸರ್ವಜ್ಞ ತಾನು ಸರ್ವರೊಳಗೊಂದೊಂದು ನುಡಿ ಕಲಿತು ವಿದ್ಯೆಯ ಪರ್ವತವೇ ಆದೆ ಎಂದು ಹೇಳಿದ್ದಾನೆ. ಅದೇ ರೀತಿ ನನ್ನ ಸರ್ಕಾರವು ಆಡಳಿತದ ವಿವಿಧ ಹಂತಗಳಲ್ಲಿ ತಜ್ಞರು, ಪರಿಣಿತರು ಮತ್ತು ಬುದ್ಧಿಜೀವಿಗಳು ನೀಡಿದ ಸಲಹೆಗಳ ಪ್ರಯೋಜನವನ್ನು ಪಡೆಯಲು ಪ್ರಯತ್ನಿಸುತ್ತಿದೆ. ಆಡಳಿತದ ವಿವಿಧ ಮಜಲುಗಳಲ್ಲಿ ಮಾರ್ಗದರ್ಶನ ಮತ್ತು ಸಲಹೆ ಪಡೆದುಕೊಳ್ಳುವ ಕ್ರಮವಾಗಿ ತಜ್ಞರ ನೇತೃತ್ವದ ವಿವಿಧ ಆಯೋಗಗಳು, ಸಮಿತಿಗಳು ಮತ್ತು ಕಾರ್ಯಪಡೆಗಳನ್ನು ರಚಿಸಿದ್ದೇವೆ. ಇವುಗಳು ಈಗಾಗಲೇ ಕಾರ್ಯಾರಂಭ ಮಾಡಿದ್ದು, ಶೀಘ್ರದಲ್ಲಿ ವರದಿ ಸಲ್ಲಿಸುವ ನಿರೀಕ್ಷೆಯಿದೆ. ಮುಂಬರುವ ನಮ್ಮ ಆಯವ್ಯಯಗಳ ತಯಾರಿ ಮತ್ತು ಹೊಸ ಯೋಜನೆಗಳ ರಚನೆಯಲ್ಲಿ ಈ ಸಮಿತಿಗಳ ಸಲಹೆಗಳನ್ನು ಪರಿಗಣಿಸಲಾಗುವುದು.

56) ವಿದ್ಯುನ್ಮಾನ ಆಡಳಿತ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ತಜ್ಞರ ಸಮಿತಿ ರಚಿಸಲಾಗಿದೆ. ರಾಜ್ಯದ ಎಲ್ಲಾ ನಾಗರಿಕರಿಗೆ ಗುರುತಿನ ಚೀಟಿ ನೀಡಲು ಪ್ರಾರಂಭಿಕ ಕ್ರಮ ತೆಗೆದುಕೊಂಡಿದೆ.

57) ವರ್ಷಗಳು ಕಳೆದಂತೆ ಹಲವಾರು ಕಾನೂನುಗಳು ಅಪ್ರಚಲಿತವಾಗಿರುವುದರಿಂದ ಮತ್ತು ಬದಲಾದ ಸಂದರ್ಭಗಳಿಂದ ಬಳಕೆಯಲ್ಲಿಲ್ಲದಂತಾಗಿವೆ. ಹೊಸ ಸವಾಲುಗಳನ್ನು ಎದುರಿಸಲು ಅಂಥ ಕಾನೂನುಗಳನ್ನು ಇಂದಿನವರೆಗೆ ಪರಿಷ್ಕರಿಸುವುದು ಅಥವಾ ಹೊಸ ಕಾನೂನುಗಳನ್ನು ರಚಿಸುವುದು ಅತ್ಯಗತ್ಯವಾಗಿದೆ. ಅದಕ್ಕಾಗಿ ನನ್ನ ಸರ್ಕಾರವು ರಾಜ್ಯ ಕಾನೂನು ಆಯೋಗವನ್ನು ರಚಿಸಿದೆ.

58) ನನ್ನ ಸರ್ಕಾರ ಮುಂದಿನ ದಿನಗಳಲ್ಲಿ ಜನರ ಆಶಯಗಳನ್ನು ಕಾರ್ಯರೂಪಕ್ಕೆ ತರಲು ಮತ್ತು ಜನರಿಗೆ ನೀಡಿದ ಹಲವಾರು ವಾಗ್ದಾನ ಮತ್ತು ಆಶ್ವಾಸನೆಗಳನ್ನು ಈಡೇರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತದೆ. ತಾವೆಲ್ಲರೂ ಈ ಗುರಿಯನ್ನು ಸಾಧಿಸಲು ಸರ್ಕಾರದೊಂದಿಗೆ ಸಹಕರಿಸುತ್ತೀರೆಂದು ಮನಃಪೂರ್ವಕವಾಗಿ ಆಶಿಸುತ್ತೇನೆ. ರಾಜ್ಯಕ್ಕೆ ಜನಪರ ಮತ್ತು ಪ್ರಗತಿಪರ ಆಡಳಿತ ನೀಡಲು ನಿಮ್ಮೆಲ್ಲರ ಭಾಗವಹಿಸುವಿಕೆ ಅತ್ಯಗತ್ಯ. ನಾವೆಲ್ಲರೂ ಕರ್ನಾಟಕವನ್ನು ದೇಶದಲ್ಲಿಯೇ ಹೆಚ್ಚು ಅಭಿವೃದ್ಧಿ ಹೊಂದಿದ ಮತ್ತು ಉತ್ತಮ ಆಡಳಿತದ ರಾಜ್ಯವನ್ನಾಗಿ ಮಾಡಲು ಒಟ್ಟಾಗಿ ಶ್ರಮಿಸೋಣ.

ಜೈ ಹಿಂದ್

ಜೈ ಕರ್ನಾಟಕ

(ಸದನವನ್ನು ಹದಿನೈದು ನಿಮಿಷಗಳ ನಂತರ ಮತ್ತೆ ಸೇರುವಂತೆ ಮುಂದೂಡಲಾಯಿತು)

(ಸದನವು ಪುನಃ ಮಧ್ಯಾಹ್ನ 02 ಗಂಟೆ 01 ನಿಮಿಷಕ್ಕೆ ಸಮಾವೇಶಗೊಂಡಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠದಲ್ಲಿದ್ದರು.)

ಅಧ್ಯಕ್ಷರು :- ಈಗ ಕಾಯದರ್ಶಿಯವರ ವರದಿ